**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 989/2021**

| | | | |
|---|---|---|---|
| ಸಾಕ್ಷಿಯ ಹೆಸರು | : ನಾಜೀಮ್ | ಸಿ.ಡಬ್ಲ್ಯು 3 |
| ತಂದೆಯ ಹೆಸರು | : ಬಶೀರ್ ಅಹಮ್ಮದ್ | ಪಿ.ಡಬ್ಲ್ಯು 3 |
| ವಯಸ್ಸು | : 29 ವರ್ಷ | |
| ಉದ್ಯೋಗ | : ವೆಲ್ಡಿಂಗ್ ಉದ್ಯೋಗ | |
| ವಾಸ ಸ್ಥಳ | : ತರೀಕೆರೆ | |

**ದಿನಾಂಕಃ 08-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ-1 ರವರ ಪರಿಚಯ ಇರುವುದಿಲ್ಲ. ಚಾಸಾ-2 ರವರ ಪರಿಚಯ ಇರುತ್ತದೆ. ನನ್ನ ಸಹಿ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ನಿಪಿ.3 ಅನ್ನು ತೋರಿಸಿದಾಗ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಯನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು. ನಿಪಿ.3 ಕ್ಕೆ ನಾನು ಎಲ್ಲಿ ಯಾವಾಗ ಮತ್ತು ಯಾತಕ್ಕಾಗಿ ಸಹಿ ಮಾಡಿದೇನೆ ಎಂದು ಗೊತ್ತಿಲ್ಲ. ನಿಪಿ.4 ಫೋಟೊದಲ್ಲಿ ನಾನು ಇದ್ದೇನೆ , ಅದರ ಬಗ್ಗೆ ಮಾಹಿತಿ ಇಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ದಿನಾಂಕ 20-11-2020 ರಂದು ರಸ್ತೆ ಅಪಘಾತ ಆಗಿದ್ದು, ಅಪಘಾತವಾದ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ನೀಡಿದ ದೂರಿನಾಧಾರದ ಮೇಲೆ ಅಪಘಾತವಾದ ಸ್ಥಳಕ್ಕೆ ಪೊಲೀಸರು ಭೇಟಿ ಕೊಟ್ಟು ನಿಪಿ.3 ರಂತೆ ಸ್ಥಳ ಪಂಚನಾಮೆ ಜರುಗಿಸಿ ನಿಪಿ.4 ರಂತೆ ಫೋಟೊ ತೆಗೆಸಿ ಸ್ಥಳದಲ್ಲಿ ನಮ್ಮ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.3 ಮತ್ತು 4 ರ ಬಗ್ಗೆ ಸಂಪೂರ್ಣ ಮಾಹಿತಿ ಇರದೇ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿ ಸ್ವತಃ ಹಾಜರಿದ್ದು, ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***